ಶ್ರೀ ಕೆ. ವಿಶ್ವೇಶ್ವರ ಹೆಗಡೆ ಕಾಗೇರಿ :- ಅವತ್ತಿನ ದಿನ ಇನ್ನೇನು ಒಂದು ವಿಷಯ ಬಂದುಬಿಡುತ್ತದೆ.

ಅಧ್ಯಕ್ಷರು :- ಇಲ್ಲ, ಏನೂ ಬರುವುದಿಲ್ಲ, ಆ ಸಮಯ ಬಂದರೆ ಶುಕ್ರವಾರ ನಾನ್-ಅಫಿಷಿಯಲ್ ಡೇ ಇದೆಯಲ್ಲಾ ಆ ದಿವಸ ಎಷ್ಟು ಪ್ರಶ್ನೆಗಳು ಇರುತ್ತವೆ ಅವೆಲ್ಲವನ್ನೂ ಹಾಕಿಕೊಳ್ಳೋಣ. ಶುಕ್ರವಾರ ನಾನ್ ಅಫಿಷಿಯಲ್ ಡೇ ಇರುತ್ತದೆ ಆ ದಿವಸ ಮಾನ್ಯ ಸದಸ್ಯರ ವಿಷಯಗಳು ಇರುತ್ತವೆ, ಆ ದಿನ 15 ಪ್ರಶ್ನೆಗಳನ್ನು ಹಾಕಿಕೊಳ್ಳೋಣ.

1 (ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಆರ್.ವಿ. ದೇಶಪಾಂಡೆ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :- ಮಾನ್ಯ ಅಧ್ಯಕ್ಷರು, ದಿನಾಂಕ: 18-07-2002ರ ಲಿಖಿತ ಮೂಲಕ ಉತ್ತರಿಸುವ 99 ಪ್ರಶ್ನೆಗಳ ಪೈಕಿ 89 ಉತ್ತರವನ್ನು ಸದನದಲ್ಲಿ ಮಂಡಿಸುತ್ತೇನೆ.

ಅಧ್ಯಕ್ಷರು :- ಅನುಬಂಧ I ಮಂಡಿಸಲಾಯಿತು

2 (i) ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: ಶಿವಮೊಗ್ಗ ಜಿಲ್ಲೆಯ ಸ್ವಾತಂತ್ರ ಸೇನಾನಿ, ಶ್ರೀ ಹೆಚ್ ಗಣಪತಿಯಪ್ಪನವರವರಿಗೆ ಸಾಮಾಜಿಕ ಬಹಿಷ್ಕಾರ ಹಾಕಿರುವ ಬಗ್ಗೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) :- ಮಾನ್ಯ ಅಧ್ಯಕ್ಷರೆ, ಶಿವಮೊಗ್ಗ ಜಿಲ್ಲೆಯ ಸಾಗರ ಮತ್ತು ಸೊರಬ ತಾಲ್ಲೂಕು ನಮ್ಮ ರಾಜ್ಯದಲ್ಲಿ ಹೋರಾಟಕ್ಕೆ ಪ್ರಸಿದ್ಧವಾಗಿರತಕ್ಕಂತಹ ರಾಷ್ಟ್ರದ ಗಮನವನ್ನು ಸೆಳೆದಿರತಕ್ಕಂತಹ ತಾಲ್ಲೂಕುಗಳು. ಈ ತಾಲ್ಲೂಕಿನಲ್ಲಿರತಕ್ಕಂತಹ ಸ್ವಾತಂತ್ರ ಸೇನಾನಿ ಶ್ರೀ ಹೆಚ್. ಗಣಪತಿಯಪ್ಪನವರಿಗೆ, ಮೊನ್ನೆ ತಾನೇ ಮಾನ್ಯ ಮುಖ್ಯಮಂತ್ರಿಗಳ ನಾಯಕತ್ವದಲ್ಲಿ ಮಂತ್ರಿಮಂಡಲದ ಅನೇಕ ಗೌರವಾನ್ವಿತ ಸದಸ್ಯರುಗಳು ಹೋಗಿದ್ದರು. ಈ ಕಾಗೋಡು ಸತ್ಯಾಗ್ರಹದ ಒಂದು ಉತ್ಸವವನ್ನು ಸಹಿತ ಆಚರಣೆ ಮಾಡಿ ಮಾನ್ಯ ಗಣಪತಿಯಪ್ಪನವರಿಗೂ ಸಹಿತ ಸನ್ಮಾನ ಮಾಡಿ ಬಂದಿರುವುದು ಇಡೀ ಸದನ ಮತ್ತು ರಾಜ್ಯದ ಜನ ಹೆಮ್ಮೆಪಡತಕ್ಕಂತಹ ವಿಚಾರವಾಗಿದೆ. ಇವತ್ತು ನಾನು ಒಂದು ಪಕ್ಷ ಅಥವಾ ಒಬ್ಬ ವ್ಯಕ್ತಿಯ ದೃಷ್ಟಿಯನ್ನಿಟ್ಟುಕೊಂಡು ಈ ಮಾತನ್ನು ಹೇಳುತ್ತಿಲ್ಲ. ಇವತ್ತು ಗಣಪತಿಯಪ್ಪನವರಿಗೆ ಆಗಿರುವಂತಹ ಅಪಮಾನವೇನಿದೆ, ಇಂತಹ ಒಬ್ಬ ವ್ಯಕ್ತಿಯ ಹಿಂದೆ ಇಡೀ ಸಮಾಜ ನಿಲ್ಲಬೇಕು, ಸರ್ಕಾರ ನಿಲ್ಲಬೇಕು, ನಾವೆಲ್ಲರೂ ಸಹ ನಿಲ್ಲಬೇಕಾಗುತ್ತದೆ ಅವರು ಬಹಳ ನೊಂದಿರತಕ್ಕಂತಹ ಮನಸ್ಸಿನಿಂದ ಹೇಳಿರತಕ್ಕಂತಹ ವಿಚಾರಗಳು ಮನಸ್ಸನ್ನು ನಾಟತಕ್ಕಂಥದ್ದು ಆಗಿದೆ. ಈ ವಿಚಾರದ ಬಗ್ಗೆ ನಾವೆಲ್ಲರೂ ತಲೆತಗ್ಗಿಸುವಂತಹ ವಿಚಾರವಾಗಿದೆ. ಇದು ಕಾಕತಾಳೀಯವೋ ಏನೋ ನನಗೆ ಅರ್ಥವಾಗುತ್ತಿಲ್ಲ. ಈ ಕಾಗೋಡು ಸತ್ಯಾಗ್ರಹದಲ್ಲಿ ಭಾಗವಹಿಸಿ, ನಮ್ಮ ರಾಜ್ಯದ ಸಮಾಜವಾದಿ ಚಳುವಳಿಯಲ್ಲಿ ಬಹಳ ಮಹತ್ವದ ಪಾತ್ರವನ್ನು ವಹಿಸಿದಂತಹ ಶ್ರೀಮಾನ್ ಕಾಗೋಡು ತಿಮ್ಮಪ್ಪನವರ ಕ್ಷೇತ್ರದಲ್ಲೇ ಇದಾಗಿರತಕ್ಕಂಥದ್ದು. ಇದರ ಜೊತೆಗೆ ಮಾನ್ಯ ಗಣಪತಿಯಪ್ಪನವರನ್ನು ಎರಡು ವರ್ಷಗಳ ಹಿಂದೆ ಯಾವುದೋ ಒಂದು ಜಮೀನಿನ ವ್ಯವಹಾರಕ್ಕೆ

ಸಂಬಂಧಪಟ್ಟ ಹಾಗೆ ಬಹಿಷ್ಕಾರ ಹಾಕಿರುವುದನ್ನು ನಾವು ಕೇಳಿದ್ದೇವೆ. ಇದಾದ ನಂತರ ಆ ಜಮೀನಿನ ಮಾಲೀಕರ ಕುಟುಂಬದವರ ಒಂದು ಮದುವೆಗೆ ಹೋದರು ಎಂಬ ಕಾರಣಕ್ಕಾಗಿ ಮತ್ತೆ ಗಣಪತಿಯಪ್ಪನವರಿಗೆ ಇಡಿ ಊರಿನವರು ಸಾಮಾಜಿಕವಾಗಿ ಬಹಿಷ್ಕಾರ ಮಾಡಿದ್ದಾರೆ. ಈ ಬಗ್ಗೆ ಅವರು ಎಸ್.ಪಿ.ಯವರಿಗೆ ಪೊಲೀಸ್ ಕಂಪ್ಲೇಂಟ್ ಕೊಟ್ಟಿದ್ದಾರೆ. ಬೆಂಗಳೂರಿಗೆ ಬಂದು ಆಡಳಿತದಲ್ಲಿರತಕ್ಕಂತಹ ಮುಖಂಡರುಗಳನ್ನು ಭೇಟಿ ಮಾಡಿದ್ದಾರೆ, ಮೊನ್ನೆ ದಿನ ಪತ್ರಕರ್ತರು, ಸಾಮಾಜಿಕ ಕಾರ್ಯಕರ್ತರೆಲ್ಲಾ ಈ ಒಂದು ವಡ್ಡಾಳ ಗ್ರಾಮಕ್ಕೆ ಭೇಟಿ ಕೊಟ್ಟಂತಹ ಸಂದರ್ಭದಲ್ಲಿ ಈ ಒಂದು ಪದ್ಧತಿಯು ಮುಂದುವರಿದುಕೊಂಡು ಹೋಗಿರುವ ಬಗ್ಗೆ ಅವರು ಮನಗಂಡಿದ್ದಾರೆ. ಈ ದಿನ ಪ್ರಜಾವಾಣಿ ದಿನಪತ್ರಿಕೆಯಲ್ಲಿ ಅದು ಮುಖಪುಟದಲ್ಲಿ ಬಂದಿರುತ್ತದೆ. ಇದರ ಜೊತೆಗೆ ನಾವು ಬಹಳ ಮುಖ್ಯವಾಗಿ ಗಮನಿಸಬೇಕಾಗಿರುವುದೆಂದರೆ, ನಾವು ಇವರಿಗೆ ಸನ್ಮಾನ ಮಾಡಿ ಗೌರವವನ್ನು ಕೊಡುವುದು ಒಂದು ಭಾಗವಾದರೆ, ಇವರು ದಲಿತರ ವರ್ಗಕ್ಕೆ ಸೇರಿದವರಲ್ಲ ಇವರ ಸ್ಥಿತಿಯೇ ಈ ರೀತಿಯಾದರೆ ಇನ್ನು ನುರಿತ ದಲಿತ ವರ್ಗಕ್ಕೆ ಸೇರಿದಂತಹ ಹರಿಜನರ ಮತ್ತು ಗಿರಿಜನರು ಪಾಡೇನು ಎಂಬುದರ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಕಳೆದ ಅಧಿವೇಶನದಲ್ಲಿ ಮಾನ್ಯ ಕಾಗೋಡು ತಿಮ್ಮಪ್ಪನವರು ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರತಕ್ಕಂತಹ ಅಜಲು ಪದ್ಧತಿಯನ್ನು ಸಂಪೂರ್ಣವಾಗಿ ನಾವು ನಿಲ್ಲಿಸಬೇಕೆಂಬ ದೃಷ್ಟಿಯಿಂದ ಇಲ್ಲಿ ಒಂದು ಮಸೂದೆಯನ್ನು ಇಲ್ಲಿ ಮಂಡಿಸಿ ಈ ವಿಚಾರದಲ್ಲಿ ಪ್ರಸ್ತಾಪ ಮಾಡಿ ನಮ್ಮೆಲ್ಲರ ಶಹಭಾಷಗಿರಿಯನ್ನು ಪಡೆದಿರತಕ್ಕಂಥದ್ದನ್ನು ನಾನು ನೋಡಿದ್ದೇವೆ. ಅದರಿಂದ ಮೊದಲನೆಯದಾಗಿ ಇದರ ಬಗ್ಗೆ ಸರ್ಕಾರದ ನಿಲುವೇನು ಎಂಬುದು ಗೊತ್ತಾಗಬೇಕು. ಸರ್ಕಾರ, ಸಮಾಜ ಮತ್ತು ನಾವೆಲ್ಲರೂ ಸಹಿತ ಶ್ರೀ ಗಣಪತಿಯಪ್ಪನವರ ಹಿಂದುಗಡೆ ನಿಲ್ಲಬೇಕಾಗುತ್ತದೆ, ಇಂತಹ ಸಾಮಾಜಿಕ ಬಹಿಷ್ಕಾರ ಹಾಕತಕ್ಕಂತಹ ಜನಗಳಿಗೆ ಶಿಕ್ಷೆಯನ್ನು ಕೊಡಬೇಕಾಗುತ್ತದೆ. ಈ ಬಗ್ಗೆ ತಿಳುವಳಿಕೆಗಳ ಮೂಲಕ, ಸಾಮಾಜಿಕ ಚಳುವಳಿಗಳ ಮೂಲಕ ಇದನ್ನು ನಿಲ್ಲಿಸುವಂತಹ ಪ್ರಯತ್ನಗಳನ್ನೂ ಸಹ ಮಾಡಬೇಕಾಗುತ್ತದೆ. ಈ ತಲೆತಗ್ಗಿಸುವಂತಹ ವಿಚಾರಗಳೇನಿವೆ, ಇದರ ಬಗ್ಗೆ ಸರ್ಕಾರದವರು ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ. ಈಗಾಗಲೇ ಶ್ರೀ ಗಣಪತಿಯಪ್ಪನವರು ಪೊಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಿದ್ದಾರೆ, ತಹಶೀಲ್ದಾರ್‌ರವರಿಗೆ ಇದರ ಬಗ್ಗೆ ವಿಚಾರಣೆಯನ್ನು ಮಾಡುವ ಬಗ್ಗೆ ಸರ್ಕಾರದವರು ತಿಳಿಸಿದ್ದಾರೆನ್ನುವ ವಿಚಾರವನ್ನು ನಾನು ಪತ್ರಿಕೆಗಳಲ್ಲಿ ಓದಿದ್ದೇನೆ. ಆ ವಿಚಾರಣೆ ಯಾವ ಹಂತದಲ್ಲಿದೆ, ಗಣಪತಿಯಪ್ಪನವರಿಗೆ ಯಾವ ರೀತಿ ರಕ್ಷಣೆಯನ್ನು ಸರ್ಕಾರ ಕೊಡಲಿಕ್ಕೆ ವಿಚಾರಮಾಡಿದೆ ಎನ್ನುವುದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ತಿಳಿಸಬೇಕು ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ತಮ್ಮ ಪರವಾನಗಿಯನ್ನು ಕೇಳ ಬಯಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವರು) :- ಮಾನ್ಯ ಅಧ್ಯಕ್ಷರೆ, ಈ ಪ್ರಕರಣ ಹೇಗಾಗಿದೆ ಅಂದರೆ ಮಳೆ ಬಿಟ್ಟರೂ ಹನಿ ಬಿಡುವುದಿಲ್ಲ ಆ ರೀತಿಯಾಗಿದೆ. ಇದರಿಂದ ಏನು ಸಾಧನೆಗಳನ್ನು ಸಾಧಿಸಬೇಕೆಂದು ಯಾವ್ಯಾವ ಜನ ಏನೇನು ಇಟ್ಟುಕೊಂಡಿದ್ದಾರೋ ನನಗೆ ಗೊತ್ತಿಲ್ಲ. ಕೆಲವರು ಅಲ್ಲಿಗೆ ಹೋಗುವುದು ಮತ್ತೆ ಕೆದಕುವುದು ಆಗಿದೆ. ನಾನು ಹೇಳುತ್ತೇನೆ ನನಗೆ ಕಟ್ ಕೊಟ್ಟಿದ್ದಾರೆಂದು ಪೊಲೀಸರಿಗೆ ಫಿರ್ಯಾದಿ ಬಂದಿಲ್ಲ. ಅವರು ನನ್ನ ಕೊಠಡಿಗೆ ಬಂದಿದ್ದರು. ಅವೊತ್ತೂ ಕೂಡ ಅವರು ನನ್ನ ಹತ್ತಿರ ಏನೂ

ಹೇಳಲಿಲ್ಲ. ನಾನು ಏಕೆ ಬಂದಿರಿ ಎಂದು ಕೇಳಿಕೊಂಡು ಕಾಫಿ ತರಿಸಿ ಕೊಟ್ಟು ಕಳುಹಿಸಿದ್ದೇನೆ. ಆಮೇಲೆ ಪೊಲೀಸರಿಗೂ ಸಹ ವರದಿ ಬಂದ ಮೇಲೆ ಹೋಗಿ ವಿಚಾರ ಮಾಡಿಯೆಂದು ಹೇಳಿದ್ದೇನೆ. ಅಲ್ಲಿ ಸಮಾಧಾನಕರವಾಗಿದೆ. ಊರಿನಲ್ಲಿ ಸಣ್ಣಪುಟ್ಟದ್ದಕ್ಕೆ ಕೋಳಿ ಹೋದದ್ದಕ್ಕೂ ವ್ಯಾಜ್ಯ ಮಾಡಿಕೊಳ್ಳುತ್ತಾರೆ. ನಾನು ಹೇಳುವುದನ್ನು ಸ್ವಲ್ಪ ಕೇಳಿ, ಇದು ನಮ್ಮ ಊರಿನಲ್ಲಿದೆ, ನಿಮ್ಮ ಊರಿನಲ್ಲಿಯೂ ಇದೆ. ಊರಿನಲ್ಲಿ ಸಣ್ಣಪುಟ್ಟದ್ದಕ್ಕೆಲ್ಲಾ ಜನ ಹೀಗೆ ಮಾಡಿಕೊಳ್ಳುತ್ತಾರೆ. ಅದನ್ನು ಅವರವರಲ್ಲಿ ಬಗೆಹರಿಸಿಕೊಳ್ಳಬೇಕು. ಅದಕ್ಕೊಂದು ರಾಜಕೀಯ ಬಣ್ಣ ಕಟ್ಟುವುದು ಸರಿಯಲ್ಲ. ಕಟ್ ಕೊಡುವಂಥ ಪ್ರವೃತ್ತಿಯಿದ್ದರೆ ಅದು ತಪ್ಪು. ಅದನ್ನು ಯಾರು ಸರಿಯಾಗಿದೆಯೆಂದು ಕಾನೂನು ಪ್ರಕಾರ ಇದೆಯೆಂದು ಹೇಳುವುದಿಲ್ಲ. ಕಟ್ ಕೊಟ್ಟಿರತಕ್ಕ ಪ್ರಸಂಗವಿದ್ದರೆ ಅವರ ಮೇಲೆ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳಿ ಎಂದು ಪೊಲೀಸರಿಗೆ ಹೇಳಿದ್ದೇನೆ. ಅಲ್ಲಿ ಹಿರಿಯ ಪೊಲೀಸ್ ಅಧಿಕಾರಿಗಳು ಅಲ್ಲಿಗೆ ಹೋಗಿ ಬಂದಿದ್ದಾರೆ. ತನಿಖೆ ನಡೆಸುತ್ತಿದ್ದಾರೆ. ನಿಜವಿದ್ದರೆ ಕ್ರಮ ಕೈಗೊಳ್ಳುತ್ತಾರೆ ಅದಕ್ಕೇನೂ ಅನುಮಾನ ಬೇಕಾಗಿಲ್ಲ. ಗುಪ್ಪೆಂದು ಹಾರಿಬಂದು ನಾನು ಇಲ್ಲಿ ಬಂದು ಕುಳಿತಿಲ್ಲ. ಪತ್ರಿಕೆಗಳಲ್ಲಿ ಏನು ಬರೆಯುತ್ತಾರೆಂಬುದು ಗೊತ್ತಿದೆ. ಅಲ್ಲಿ ಅವರು ಇದನ್ನೇ ಉಪಯೋಗಿಸಿಕೊಂಡು ಚುನಾವಣೆಯಲ್ಲಿ ರಾಜಕೀಯ ಶಕ್ತಿಯನ್ನು ಬೆಳೆಸಿಕೊಳ್ಳುವುದಕ್ಕೆ ಮಾಡುತ್ತಾರೆನ್ನುವ ವ್ಯಾಖ್ಯಾನ ಬರುವ ರೀತಿಯಲ್ಲಿ ಬಹಳ ಸೂಕ್ಷ್ಮವಾಗಿ ಎಳೆ ಎಳೆಯಾಗಿ ಪತ್ರಿಕಾ ವರದಿಯಲ್ಲಿ ಸುದ್ದಿ ಬಂದಂತಹ ನಮೂನೆಯನ್ನು ನೋಡಿದರೆ ಗೊತ್ತಾಗುತ್ತದೆ. ಆದ್ದರಿಂದ ಇವತ್ತು ಅಂತಹ ಪರಿಸ್ಥಿತಿ ಇದ್ದರೆ ಖಂಡಿತವಾಗಿ ಸರ್ಕಾರ ಎಲ್ಲಾ ರಕ್ಷಣೆಯನ್ನು ಕೊಡುತ್ತದೆ. ಈಗ ಕೊಟ್ಟಿದೆ. ಆ ತರಹ ಭಯಭೀತಿ ವಾತಾವರಣ ಇಲ್ಲ, ವಾತಾವರಣ ತಿಳಿಯಿದೆ. ದಯವಿಟ್ಟು ಇದನ್ನು ಇಲ್ಲಿಗೆ ಬಿಟ್ಟುಬಿಡುವುದು ಒಳ್ಳೆಯದು.

ಶ್ರೀ ಪಿ.ಜಿ.ಆರ್. ಸಿಂಧ್ಯ :- ಮಾನ್ಯ ಅಧ್ಯಕ್ಷರೆ, ನಾನು ಮಂತ್ರಿಗಳಿಂದ ಬಯಸತಕ್ಕದ್ದು ಈ ವ್ಯಾಖ್ಯಾನವಲ್ಲ. ಪತ್ರಿಕೆಗಳಲ್ಲಿ ಏನು ಬರೆದಿದ್ದಾರೆ ಅದರ ಬಗ್ಗೆ ಸದನದ ಹೊರಗಡೆ ತಮಗೇನು ಬೇಕೋ ಅದನ್ನು ಪತ್ರಿಕಾ ಸಂದರ್ಶನ ಕರೆದು ಹೇಳಿ. ಗಣಪತಿಯಪ್ಪನವರು ಏನು ಹೇಳಿದ್ದಾರೆ ಅಂದರೆ ನಾನು ಕಾಗೋಡು ತಿಮ್ಮಪ್ಪನವರ ಛೇಂಬರಿಗೆ ಹೋಗಿದ್ದೆ, ಅವರು ಹೇಗಿದ್ದೀಯ ಎಂದು ಕೇಳುವ ವ್ಯವಧಾನ ಕೂಡ ತೋರಿಸಲಿಲ್ಲ. ನಾನು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದೇನೆ. ಗಾಂಧೀಜಿಯವರನ್ನು ಕಂಡವನು. ನನಗೆ ಏಕೆ ಹೀಗಾಗುತ್ತಿದೆಯೆಂದು ತಿಳಿಯುತ್ತಿಲ್ಲ. ಶಿವಮೊಗ್ಗ ಎಸ್‌ಪಿಗೆ ದೂರು ಕೊಟ್ಟಿದ್ದೇನೆಂದು ಅವರು ಹೇಳಿದ್ದಾರೆ. ಇದು ಪತ್ರಿಕೆಗಳಲ್ಲಿ ವರದಿಯಾಗಿರುವುದು, ಬಹಿಷ್ಕಾರ ಇದೆಯೋ ಇಲ್ಲವೋ ಅದನ್ನು ಸರ್ಕಾರದವರು ಹೇಳಬೇಕು. ಅದು ನಮಗೆ ಗೊತ್ತಾಗಬೇಕಲ್ಲಾ. ಎಸ್‌ಪಿ ಅವರ ಕಛೇರಿಯಲ್ಲಿ ದೂರು ದಾಖಲಾಗಿದೆಯೋ ಇಲ್ಲವೋ? ಮತ್ತೆ ಸರ್ಕಾರದವರು ಹೇಳಿದ್ದಾರೆ, ತಾಲ್ಲೂಕು ಮ್ಯಾಜಿಸ್ಟ್ರೇಟರಿಂದ ಎನ್‌ಕ್ವಾಯರಿ ಮಾಡುತ್ತಿದ್ದೇವೆಂದು ಎರಡು ವಿಚಾರಗಳ ಬಗ್ಗೆ ವಿವರಣೆಯನ್ನು ಕೇಳುವುದಕ್ಕೆ ಬಯಸುತ್ತೇನೆ. ನನ್ನ ಅಭಿಪ್ರಾಯದಲ್ಲಿ ನಾವೆಲ್ಲರೂ ಗಣಪತಿಯಪ್ಪನವರ ಹಿಂದುಗಡೆ ನಿಲ್ಲಬೇಕಾಗುತ್ತದೆ. ತಾವು ಅಜಲು ಪದ್ಧತಿಯನ್ನು ರದ್ದು ಮಾಡಿದಾಗ ನಾವು ಪ್ರಶಂಸೆ ಮಾಡಲಿಲ್ಲವೇ? ಇಡೀ ರಾಜ್ಯದಲ್ಲಿರತಕ್ಕ ಎಲ್ಲಾ ರೀತಿಯ ಅನಿಷ್ಟ ಪದ್ಧತಿಯನ್ನು ಪ್ರತಿಭಟನೆ

ಮಾಡಬೇಕಾಗುತ್ತದೆ. ಇಂತಹ ಅವಮಾನಕ್ಕೆ ಒಳಗಾದರೆ ತಾತ್ಸಾರಕ್ಕೆ ಒಳಗಾದರೆ ಅಂತಹವರ ಜೊತೆಯಲ್ಲಿ ನಿಲ್ಲಬೇಕು. ನಾನು ಈ ಸದನದಲ್ಲಿ ಸರ್ಕಾರದಿಂದ ಕೇಳತಕ್ಕದ್ದು ಬಹಿಷ್ಕಾರ ಇದೆಯೋ ಇಲ್ಲವೋ? ಪೊಲೀಸ್ ಕೇಸ್ ದಾಖಲಾತಿ ಲಾಗಿದೆಯೋ ಇಲ್ಲವೋ? ಸರ್ಕಾರ ವಿಚಾರಣೆ ಮಾಡುತ್ತಿದೆಯೋ ಇಲ್ಲವೋ? ಇದರ ಬಗ್ಗೆ ಸರ್ಕಾರದ ನಿಲುವೇನೆಂಬುದನ್ನು ಕೇಳುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ :- ಪೊಲೀಸ್ ಇಲಾಖೆಯವರು ಇದರ ಬಗ್ಗೆ ತನಿಖೆ ಮಾಡುತ್ತಿದ್ದಾರೆ. ನಾನು ಪೊಲೀಸರನ್ನು ಕರೆಸಿ ವಿಚಾರಣೆ ಮಾಡಿದಾಗ, ಗಣಪತಿಯಪ್ಪನವರಿಂದ ಫಿರ್ಯಾದು ಬಂದಿಲ್ಲವೆಂದು ಹೇಳಿದರು. ಆದರೂ ಕೂಡ ಇದನ್ನು ತನಿಖೆ ಮಾಡಿಯೆಂದು ಹೇಳಿದ್ದೇನೆ. ತನಿಖೆ ನಡೆಯುತ್ತಿದೆ. ಅಂತಿಮ ವರದಿ ಯಾವ ರೀತಿ ಬಂದಿದೆಯೆಂದು ನಾನು ತಿಳಿದುಕೊಂಡಿಲ್ಲ. ತಿಳಿದು ನಾನು ಸದನಕ್ಕೆ ಬೇಕಾದರೆ ತಿಳಿಸುತ್ತೇನೆ. ಜೊತೆಗೆ ತಾವೇನು ಹೇಳಿದ್ದೀರಿ, ಗಣಪತಿಯಪ್ಪನವರ ಹಿಂದೆ ನಿಲ್ಲೋಣವೆಂದು ಹೇಳಿದ್ದೀರಿ. ಗಣಪತಿಯಪ್ಪನವರ ಹಿಂದೆ ನಿಲ್ಲುವುದು ಅಷ್ಟೇ ಅಲ್ಲ, ಗಣಪತಿಯಪ್ಪನವರನ್ನು ಭುಜದ ಮೇಲೆ ಕೂರಿಸಿಕೊಂಡು ಅವರಿಗೆ ರಕ್ಷಣೆ ಕೊಡುವ ಕೆಲಸವನ್ನು ನಾವು ನೀವು ಸೇರಿ ಮಾಡೋಣ.

ಅಧ್ಯಕ್ಷರು :- ತುರುವೇಕೆರೆ ಮತ್ತು ಚಿಕ್ಕನಾಯಕನಹಳ್ಳಿ ತಾಲ್ಲೂಕುಗಳಲ್ಲಿ ಆನೆಗಳು ಬಂದು ಜನರಿಗೆ ತೊಂದರೆ ಕೊಡುತ್ತಿರುವ ಬಗ್ಗೆ ಮಾನ್ಯ ಲಕ್ಷ್ಮೀನಾರಾಯಣರವರು ನಿನ್ನೆ ಪ್ರಸ್ತಾಪ ಮಾಡಿದ್ದೀರಿ. ಈಗ ಮಂತ್ರಿಗಳು ಉತ್ತರ ಕೊಡುತ್ತಾರೆ, ನಂತರ ಏನಾದರೂ ಕ್ಲಾರಿಫಿಕೇಷನ್ಸ್ ಇದ್ದರೆ ಕೇಳಿ.

3 ಮಂತ್ರಿಗಳ ಹೇಳಿಕೆ

ಚಿಕ್ಕನಾಯಕನಹಳ್ಳಿ ತಾಲ್ಲೂಕುಗಳಲ್ಲಿ ಆನೆಗಳ ಹಾವಳಿಯಿಂದ ಗ್ರಾಮೀಣ ಜನರಿಗೆ ಉಂಟಾಗಿರುವ ತೊಂದರೆ ಬಗ್ಗೆ -

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :- ಮಾನ್ಯ ಅಧ್ಯಕ್ಷರೆ ತಮ್ಮ ಅನುಮತಿ ಪಡೆದು ಈ ಕೆಳಕಂಡ ಹೇಳಿಕೆಯನ್ನು ಮಾಡುತ್ತೇನೆ. ತುಮಕೂರು ಜಿಲ್ಲೆ, ತುರುವೇಕೆರೆ ತಾಲ್ಲೂಕು ದಿಂಡಿನಶಿವರ ಹೋಬಳಿ ಮಾರುತಮ್ಮನಹಳ್ಳಿಗೆ ಆ ಗ್ರಾಮಕ್ಕೆ 5 ಆನೆಗಳು ಬಂದು ಮಾರುತಮ್ಮನಹಳ್ಳಿ ಗ್ರಾಮದ ಸುಮಾರು 25 ವರ್ಷದ ನವೀನ್‌ಕುಮಾರ್ ಅವರನ್ನು ಆನೆ ಈ ದಿನ ಬೆಳಿಗ್ಗೆ 6.30ಕ್ಕೆ ಹಲ್ಲೆ ಮಾಡಿದೆ. ಆನೆಗಳ ತುಳಿತಕ್ಕೆ ಒಳಗಾಗಿ ಹತ್ಯೆ ಆಗಿದ್ದಾನೆ. ಈ ಬಗ್ಗೆ ಉಪ ಅರಣ್ಯಾಧಿಕಾರಿಗಳು ಸ್ಥಳಕ್ಕೆ ಭೇಟಿ ಕೊಟ್ಟು ಮೃತರ ಕುಟುಂಬಕ್ಕೆ ಒಂದು ಲಕ್ಷ ರೂಪಾಯಿಗಳ ಪರಿಹಾರ ಘೋಷಿಸಿದ್ದಾರೆ. ಹಾಗೂ ಉತ್ತರಾದಿಕ್ರಿಯೆಗಳಿಗೆಂದು ಐದು ಸಾವಿರ ರೂಪಾಯಿ ನೀಡಲಾಗಿದೆ. ಈ ಆನೆಗಳು ಕನಕಪುರ, ಚನ್ನಪಟ್ಟಣ, ಮಾಗಡಿ, ಸಾವನದುರ್ಗ ಮಾರ್ಗವಾಗಿ ದಿನಾಂಕ 14-7-2002ರಂದು ಹುಲಿಯೂರು ದುರ್ಗದ ಅರಣ್ಯಕ್ಕೆ ಬಂದಿರುತ್ತವೆ. ಆ ಆನೆಗಳು ಅಲ್ಲಿಂದ ಇಪ್ಪಾಡಿ ಮೂಲಕ ತೆರಳಿ ಸಂತೆಮಾವತ್ತೂರಿನ ನೆಡುತೋಪಿನಲ್ಲಿ ರಾತ್ರಿ ಬೀಡುಬಿಟ್ಟಿರುತ್ತವೆ. ದಿನಾಂಕ 17-7-2002 ರಂದು ಕುಣಿಗಲ್ ತಾಲ್ಲೂಕು ಕಗ್ಗೆರೆ ಮಾರ್ಗವಾಗಿ ಹೊರಟು ಯಡಿಯೂರಿನ ತುರುಗನೂರು ಹತ್ತಿರದ ಹಳ್ಳಿಯ ಬಳಿ ಬೀಡುಬಿಟ್ಟಿದ್ದವು. ದಿನಾಂಕ 15-7-2002ರಂದು ರಾತ್ರಿ ಬೆಳಗಿನ ಜಾವ ತುರುವೇಕೆರೆ